## ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

**ಸ್ಪೆಷಲ್ ಕೇಸ್ ನಂಃ 756/2023**

| | ಚಾಸಾಃ 3 | ಅಸಾಃ 11 |
|---|---|---|
| ಹೆಸರು | ತಂಗ್ಯಮ್ಮ ಯಾನೆ ನಂಜಮ್ಮ | |
| ಗಂಡನ ಹೆಸರು : | ಹನುಮಂತೇಗೌಡ | |
| ವಯಸ್ಸು: | 85 ವರ್ಷ | |
| ಕೆಲಸಃ | ವಿಶ್ರಾಂತಿ | |
| ವಾಸಸ್ಥಳ | ಬಿ. ಕಾಟೀಹಳ್ಳಿ ಕೊಪ್ಪಲು ಗ್ರಾಮ | |

ದಿನಾಂಕಃ **09.09.2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ಆರೋಪಿತರು ನನಗೆ ಗೊತ್ತಿಲ್ಲ. ಅವರು ಯಾವ ಊರಿನವರು ಅವರು ಯಾವ ಜನಾಂಗದವರು ಎಂದು ಗೊತ್ತಿಲ್ಲ. ನಾನು ಅವಿದ್ಯಾವಂತೆ. ಹೆಬ್ಬೆಟ್ಟಿನ ಗುರುತು ಹಾಕುತ್ತೇನೆ. ಚಾಸಾ-2 ನನಗೆ ಗೊತ್ತಿಲ್ಲ. ಚಾಸಾ-4 ರವರು ಸಹಾ ಗೊತ್ತಿಲ್ಲ. ನಮ್ಮ ಮನೆಯಲ್ಲಿ ನಾನು ಒಬ್ಬಳೆ ಇರುತ್ತೇನೆ. ನನಗೆ ಕಾಂತರಾಜು ರವರು ಗೊತ್ತು. ಅವರು ಒಂದು ಹೋಟೇಲ್ ನಲ್ಲಿ ಕೆಲಸ ಮಾಡಿಕೊಂಡು ಇದ್ದರು. ಅವರು ಒಂದು ತಿಂಗಳು ಬಾಡಿಗೆಗೆ ಇರುತ್ತೇನೆ ಎಂದು ನಮ್ಮ ಮನೆಗೆ ಬಂದಿದ್ದರು. ಅವರಿಗೆ ನಮ್ಮ ಮನೆಯನ್ನು ರೂ. 2000/- ಕ್ಕೆ ಬಾಡಿಗೆಗೆ ಕೊಟ್ಟಿರುತ್ತೇನೆ. ಅವರು ಯಾವ ಊರಿನವರು ಮತ್ತು ಅವರು ಯಾವ ಜಾತಿಗೆ ಸೇರಿರುತ್ತಾರೆ ಎಂದು ಗೊತ್ತಿಲ್ಲ. ಅವರು ಏನಾದರೂ ಎಂದು ನನಗೆ ಗೊತ್ತಿಲ್ಲ. ಅವರು ಬದುಕಿದ್ದಾರಾ ಅಥವಾ ತೀರಿಕೊಂಡಿರುತ್ತಾರಾ ಎಂದು ನನಗೆ ಗೊತ್ತಿಲ್ಲ. ಅವರ ಸಾವಿಗೆ ಯಾರು ಕಾರಣ, ಏನು ಕಾರಣ ಎಂದು ನನಗೆ ಗೊತ್ತಿಲ್ಲ. ಅವರು ಹೇಗೆ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ಪೊಲೀಸರು ಈ ಕೇಸಿನ ಬಗ್ಗೆ ನನ್ನನ್ನು ಎಲ್ಲಿಗೂ ಕರೆದಿರುವುದಿಲ್ಲ. ಪೊಲೀಸರು ನಮ್ಮ ಮನೆಯ ಹತ್ತಿರ ಬಂದಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ಮಹಜರ್ ಮಾಡಿಲ್ಲ. ನಾನು ಪೊಲೀಸರಿಗೆ ಸ್ಥಳ ತೋರಿಸಿಲ್ಲ. ನಿಪಿ-9 ರ ವಿಷಯ ಗೊತ್ತಿಲ್ಲ. ಸಾಕ್ಷಿ ನಿಪಿ-10 ರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಇತರರ ಇರುವಿಕೆಯನ್ನು ಅದನ್ನು ಎಲ್ಲಿ ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ.

3. ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಸಾಕ್ಷಿಗೆ ವಿಡಿಯೋವನ್ನು ತೋರಿಸಲಾಗಿ ಸಾಕ್ಷಿ ತನಗೆ ಕಣ್ಣು ಸರಿಯಾಗಿ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮುಮಾ-1 ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿಲ್ಲ ಎಂದು ನುಡಿಯುತ್ತಾರೆ.

( ಈ ಹಂತದಲ್ಲಿ ಅಭಿಯೋಗದ ಕೇಸಿಗೆ ಸಾಕ್ಷಿ ಪ್ರತಿಕೂಲ ಸಾಕ್ಷಿ ನುಡಿದಿದ್ದು ಮಾನ್ಯ ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)

<u>ಪಾಟೀಸವಾಲುಃ ಎಸ್‌ಪಿಪಿ ರವರಿಂದಃ</u>

4. ದಿನಾಂಕ:-17-10-2023 ರಂದು ರಾತ್ರಿ ನಾನು ಊಟ ಮಾಡಿ ಮಲಗಿದ್ದೆ ಎಂದರೆ ಸರಿ. ಸುಮಾರು ಹತ್ತೂವರೆ ಗಂಟೆ ಸಮಯದಲ್ಲಿ ನಮ್ಮ ಮನೆಯ ಮುಂದೆ ಯಾರೋ ಹೊಡೆದಾಡಿಕೊಳ್ಳುತ್ತಿರುವ ಶಬ್ದ ಕೇಳಿಸಿತು ಎಂದರೆ ಸರಿಯಲ್ಲ. ತಕ್ಷಣ ನಾನು ಡೋರ್ ತೆಗೆದು ಹೊರಗಡೆ ಹೋಗಿ ನಿಮ್ಮಿಗೆ ಏನು ಬಂದಿತೆ, ಇಷ್ಟೊತ್ತಲ್ಲಿ, ಇಂಗಾಡ್ತಿದ್ದೀರಾ ಅಂತಾ ಬೈಯ್ದೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ರೂಂ ನಲ್ಲಿ ಮಲಗಿದ್ದ ಚಾಸಾ-2 ರವರು ಕೂಡ ಎದ್ದು ಬಂದಳು ಎಂದರೆ ಸರಿಯಲ್ಲ. ಬೀದಿ ಲೈಟ್ ಬೆಳಕು ಹಾಲು ಚೆಲಿದಂತೆ ಬೆಳಕು ಕಾಣುತ್ತಿತ್ತು ಎಂದರೆ ನಮ್ಮ ಮನೆಯ ಮುಂದೆ ಒಂದು ಲೈಟ್ ಇದೆ ಎಂದು ನುಡಿಯುತ್ತಾರೆ.

5. ನಮ್ಮ ಊರಿನವನೇ ಇದೇ ಜನತಾ ಕಾಲೋನಿಯ ವೆಂಕಟೇಶ 1ನೇ ಆರೋಪಿಯು ನಮ್ಮ ಮನೆಯಲ್ಲಿ ಬಾಡಿಗೆಗೆ ವಾಸವಿದ್ದ ಮೃತ ಕಾಂತರಾಜುಗೆ

ಬಾಳೆಗೊನೆ ದಿಂಡಲಿ ಹೊಡೆಯುತ್ತಿದ್ದ ಎಂದರೆ ಸರಿಯಲ್ಲ. ಉಳಿದ 3 ಜನ ನಮ್ಮ ಏರಿಯಾದಲ್ಲಿ ಒಟ್ಟಿಗೆ ವಾಸವಿದ್ದು, ಅವರು ಮೃತ ಕಾಂತರಾಜುನನ್ನು ಸಿಮೆಂಟ್ ರೋಡಲ್ಲಿ ಎಳೆದಾಡಿ ಈ ನನ್ನ ಮಗನ್ನ ಮುಗಿಸಬೇಕು ಅಂತಾ ಹೊಡೆಯುತ್ತಿದ್ರು ಎಂದರೆ ಸರಿಯಲ್ಲ.

6. 1ನೇ ಆರೋಪಿಯು ಮೊದಲಿಂದನೂ ನನಗೆ ಗೊತ್ತು ಎಂದರೆ ಸರಿಯಲ್ಲ. ಉಳಿದ 3 ಜನ ಆರೋಪಿತರು ಕೂಡ ಘಟನೆಯ 2-3 ತಿಂಗಳಿನ ಹಿಂದಿನಿಂದಲೂ ಡೈಲೀ ಒಟ್ಟಿಗೇ ನಮ್ಮ ಮನೆ ಮುಂದೇನೇ ಊಟ ತಿಂಡಿಗೆ ಚೇತನ್ ಹೋಟೆಲ್ ಗೆ ಹೋಗುತ್ತಾರೆ ಬರ್ತಾರೆ ಅವರನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ನಾನು ಗಲಾಟೆ ನೋಡಿ 1ನೇ ಆರೋಪಿಗೆ, ಮೃತ ಕಾಂತರಾಜ ಕುಡಿದ್ದಾನೆ ಯಾಕೆ ಇಂಗೇ ಹೊಡಿತಿದ್ದೀರಾ ಏನಾದ್ರೂ ಹೆಚ್ಚು ಕಮ್ಮಿ ಆದ್ರೆ ಏನು ಕಥೆ ಅಂತಾ ಬೈಯ್ಯದೆ ಎಂದರೆ ಸರಿಯಲ್ಲ. 1ನೇ ಆರೋಪಿಯು ಕಾಂತರಾಜು ಇಷ್ಟೊತ್ತಲ್ಲೀ, ಚಾಸಾ-2 ರವರ ರೂಂ ಹತ್ತಿರ ನಿಂತಿದ್ದ ಇವನಿಗೆ ಇಷ್ಟೊತ್ತಲ್ಲಿ ಇಲ್ಲೇನು ಕೆಲಸ, ಕೇಳಿದ್ರೆ ನಮಗೆ ಅವಾಜ್ ಆಗ್ತಾನೆ ಹೊರಗಡೆ ಇಂದ ಬಂದು ಇವನದು ಯಾಕೋ ಜಾಸ್ತಿ ಆಯ್ತು, ನಮ್ಮ ಸಹವಾಸ ಇವ್ನಿಗೆ ಗೊತ್ತಿಲ್ಲಾ ಅಂತಾ ಹೇಳಿದ ಎಂದರೆ ಸರಿಯಲ್ಲ.

7. 1ನೇ ಆರೋಪಿಯು ಮೃತ ಕಾಂತರಾಜುನನ್ನು ನವೀನ ಪೈಂಟ್ ಅಂಗಡಿಯ ಹತ್ತಿರ ಎಳೆದುಕೊಂಡು ಹೋಗಿದ್ದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ಚಾಸಾ-4 ರವರು ಹೊರಗೆ ಬಂದು ಗಲಾಟೆಯನ್ನು ನೋಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಕೂಡ ಆರೋಪಿತರಿಗೆ ಬೈದರು ಎಂದರೆ ಸರಿಯಲ್ಲ. ಕುಡಿದವರ ವಿಚಾರ ನಮಗೇನು ಎಂದು ಹೇಳಿ ನಾನು ಮತ್ತು ಚಾಸಾ-4 ರವರು ಮನೆಗೆ ಹೋದೆವು ಎಂದರೆ ಸರಿಯಲ್ಲ. ಆಗ ಸಮಯ ಸುಮಾರು 11.30 ಆಗಿತ್ತು ಎಂದರೆ ಸರಿಯಲ್ಲ.

8. ಬೆಳಿಗ್ಗೆ ಎದ್ದಾಗ ಕಾಂತರಾಜು ಹೆಣ ಅರಸೀಕೆರೆ ಮೇನ್ ರೋಡ್ ಪಕ್ಕ ಕಟಿಂಗ್ ಶಾಪ್ ಹತ್ತಿರ ಬಿದ್ದಿರೋದಾಗಿ ಜನ ಮಾತಾಡಿಕೊಳ್ಳುತ್ತಿದ್ದು ಎಂದರೆ

ಸರಿಯಲ್ಲ. ನವೀನ್ ಪೆಯಿಂಟ್ ಅಂಗಡಿಲಿ ಸಿ.ಸಿ ಕ್ಯಾಮೆರಾ ಇದೆ ಅಂತಾ ಪೊಲೀಸರು ಕೂಡ ಬಂದು ನೋಡ್ತಾ ಇದ್ರು ಅದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ.

9. ದಿನಾಂಕ:-19-10-2023 ರಂದು ಮದ್ಯಾಹ್ನ 12-00 ಗಂಟೆಗೆ ನಾನು ಮನೆಯಲ್ಲಿದ್ದಾಗ ಪೊಲೀಸರ ಜೀಪುಗಳು ಮನೆಯ ಹತ್ತಿರ ಬಂದವು ಎಂದರೆ ಸರಿಯಲ್ಲ. ಜೀಪ್ ನಿಂದ 1ನೇ ಆರೋಪಿ ಕೆಳಗೆ ಇಳಿದು ಪೊಲೀಸರನ್ನು ಕರೆದುಕೊಂಡು ಬಂದು ನಮ್ಮ ಮನೆಯ ಮುಂದೆ ಗಲಾಟೆ ಆಗಿ ಸತ್ತಿರುವ ಕಾಂತರಾಜನಿಗೆ ಹೊಡೆಯುತ್ತಿದ್ದ ಜಾಗ ತೋರಿಸಿದನು ಎಂದರೆ ಸರಿಯಲ್ಲ.

10. ಅದೇ ದಿನ ರಾತ್ರಿ ಮೃತ ಕಾಂತರಾಜುಗೆ 1ನೇ ಆರೋಪಿಯೊಂದಿಗೆ ಸೇರಿಕೊಂಡು ಹೊಡೆಯುತ್ತಿದ್ದ ಉಳಿದ 3 ಜನ ಆರೋಪಿತರು ಕೂಡ ಇನ್ನೊಂದು ಜೀಪ್ ನಿಂದ ಇಳಿದು ಬಂದು ಅದೇ ಜಾಗವನ್ನು ತೋರಿಸಿದರು ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ, 4 ಜನರಿಗೂ ಅನ್ಯಾಯವಾಗಿ ಕಾಂತರಾಜುಗೆ ಹೊಡೆದು ಸಾಯಿಸಿದ್ರುಲಾ... ಅಂತಾ ಬೈಯ್ದೆ ಎಂದು ಹೇಳಿದೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಸ್ಥಳದಲ್ಲಿ ಮದ್ಯಾಹ್ನ 12.00-12-30 ಗಂಟೆ ಸಮಯದಲ್ಲಿ ಪೊಲೀಸರು ನಿಪಿ-9 ರಂತೆ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿದ್ದು ನಿಪಿ-9 ರ ಸಂಗತಿಗಳನ್ನು ತಿಳಿದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲಲ. ಆ ಸಮಯದಲ್ಲಿ 1ನೇ ಆರೋಪಿ ಹಾಜರುಪಡಿಸಿದ್ದ ಸುಮಾರು ಎರಡು ಕಾಲು ಅಡಿ ಉದ್ದದ ಮುಮಾ-1 ನ್ನು ಅಮಾನುತಪಸಿಡಿಕೊಂಡರು ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನಿಪಿ-10 ರಂತೆ ಪೊಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

11. ನಿಪಿ-9 ಮತ್ತು 10 ಸಂಗತಿಗಳನ್ನು ತಿಳಿದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿ. 20.10.2023 ರಂದು ಘಟನೆ ಕುರಿತು ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-26 ಎಂದು ಗುರುತಿಸಲಾಯಿತು.

12. ದಿ. 01.12.2023 ರಂದು ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಾಸನ ಇವರ ಮುಂದೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರಡಿಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-27 ಎಂದು ಗುರುತಿಸಲಾಯಿತು.

13. ನನಗೆ ನಿಪಿ-9, 26 ಮತ್ತು 27 ಸಂಗತಿಗಳು ಗೊತ್ತಿದ್ದರೂ ಸಹಾ ಆರೋಪಿತರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಕಾಂತರಾಜುವಿನ ಊರು ಮತ್ತು ಜಾತಿ ಗೊತ್ತಿದ್ದರೂ ಸಹಾ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಿಸಿಟಿವಿ ಫೂಟೇಜ್‌ನ ಸಂಗತಿ ಗೊತ್ತಿದ್ದರೂ ಸಹಾ ಕಾಣಿಸುತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾರೂ ಒತ್ತಾಯ ಮಾಡಿಲ್ಲ, ಪ್ರಭಾವ ಬೀರಿಲ್ಲ, ನಾನು ಸ್ವತಃ ಸಾಕ್ಷಿ ನುಡಿಯುತ್ತಿದ್ದೇನೆ.

<u>ಪಾಟೀ ಸವಾಲುಃ 1 ರಿಂದ 4ನೇ ಆರೋಪಿತರ ಪರ ವಕೀಲರಿಂದಃ</u>

14. ಆರೋಪಿತರ ಪರ ಪಾಟೀ ಸವಾಲು ಏನು ಇಲ್ಲವೆಂದು ತಿಳಿಸಿರುತ್ತಾರೆ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ